ಕೆ.ಸಿ.ಡಿ. ಸಮಾಚಾರ

ಶಿಕ್ಷಣ-ಸಂಸ್ಕೃತಿ-ಸಮಾಜ ನಮ್ಮ ಧ್ಯೇಯ, ನಿಷ್ಠೆ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

KCD JOURNALISM CLUB DHARWAD

ಕರ್ನಾಟಕ ಮಹಾವಿದ್ಯಾಲಯ ಧಾರವಾಡ 100 Years Centenary Celebration 2017-18 KARNATAK COLLEGE DHARWAD

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ:19 ಸಂಪುಟ:4 ಪುಟ:2

@KACD100 @Ksamachar Kcdsamachara@gmail.com Readers can view at Kcd2017.blogspot.in

## ಬೆಳಕು

ಹಣವಿಲ್ಲದವರೆಲ್ಲ ಬಡವರು ಅನ್ನಲಾಗದು. ಕನಸು ಮತ್ತು ನಿರೀಕ್ಷೆಗಳಿಲ್ಲದವರು ನಿಜವಾದ ಬಡವರು. ಉತ್ತಮ ಆಶಯಗಳೊಂದಿಗೆ ಕನಸಿನ ಹಿಂದೆ ಸಾಗಿ ಶ್ರೀಮಂತರಾಗೋಣ.

## Unbelievable facts.



There is no record of a successful escape from the Alcatraz prison in San Francisco Bay. An Interesting, preventative tactic they used was to provide the prisoners with hot water showers to make them more vulnerable to frigd waters of the Bay during an escape attempt.

## ನಗೆ ಹೊನಲು




# ಐದೇ ದಿನದಲ್ಲಿ 112 ಶೌಚಗೃಹ ಎನ್.ಎಸ್.ಎಸ್ ಸ್ವಯಂ ಸೇವಕರಿಂದ ನಿರ್ಮಾಣ

ಕರ್ನಾಟಕ ವಿಶ್ವವಿದ್ಯಾಲಯವು ಭಾರತ ಸರಕಾರದ ಮಹತ್ವಕಾಂಕ್ಷಿ ಯೋಜನೆಯಾದ ಉನ್ನತ ಭಾರತದ ಅಭಿಯಾನ ಎಂಬ ಕಾರ್ಯಕ್ರಮಕ್ಕೆ ಆಯ್ಕೆ ಆಗಿದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಪ್ರಮೋದ ಗಾಯಿ ಘೋಷಿಸಿದರು. ಅವರು ಸೋಮವಾರದಂದು ಯಾದವಾಡ ಗ್ರಾಮ ಪಂಚಾಯತ ಆವರಣದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್. ಸ್ವಯಂ ಸೇವಕರು ನಿರ್ಮಿಸಿದ 112 ಶೌಚಾಲಯಗಳನ್ನು ಧಾರವಾಡ ಜಿಲ್ಲೆಯ ಯಾದವಾಡ ಗ್ರಾಮದ ಜನರಿಗೆ ಹಸ್ತಾಂತರಿಸಿ ಮಾತನಾಡಿದರು.

ಕರ್ನಾಟಕ ವಿಶ್ವವಿದ್ಯಾಲಯವು ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಗ್ರಾಮೀಣ ಅಭಿವೃದ್ಧಿ ಮತ್ತು ನೈರ್ಮಲ್ಯದಂತಹ ಕಾರ್ಯಕ್ರಮಗಳ ಮುಖಾಂತರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು, ಸದ್ಯ ಕರ್ನಾಟಕ ವಿಶ್ವವಿದ್ಯಾಲಯವು ಧಾರವಾಡ ಜಿಲ್ಲೆಯ ಮನಸೂರ ಗ್ರಾಮವನ್ನು ದತ್ತು ಪಡೆದಿದ್ದು, ಅಲ್ಲಿ ಈಗಾಗಲೇ ಅನೇಕ ಕಾರ್ಯಕ್ರಮಗಳ ಮುಖಾಂತರ ಸಮಾಜಿಕ ಆರ್ಥಿಕ ಸಾಂಸ್ಕೃತಿಕ ಶೈಕ್ಷಣಿಕ ವಲಯಗಳಲ್ಲಿನ ಜನರನ್ನು ಮುಖ್ಯವಾಹಿನಿಗೆ ತರುವ ಉದ್ದೇಶ ಈ ಕಾರ್ಯಕ್ರಮ ಇದಾಗಿದೆ ಎಂದ ಅವರು ಅಕ್ಟೋಬರ್ ಎರಡನೇ ದಿನಾಂಕ ಮಹಾತ್ಮಾ ಗಾಂಧಿ ಹುಟ್ಟು ಹಬ್ಬದ ಪ್ರಯುಕ್ತ ಕರ್ನಾಟಕ ರಾಜ್ಯದಲ್ಲಿ ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿ ಘೋಷಿಸಿಲು ಗುರಿಯನ್ನು ಹೊಂದಿದ್ದು, ಈ ಉದ್ದೇಶ ಸಾಕಾರಗೂಳಿಸಲು ಎನ್.ಎಸ್. ಎಸ್ ಸ್ವಯಂ ಸೇವಕರು ಇಂದು 112 ಶೌಚಾಲಯಗಳನ್ನು ನಿರ್ಮಿಸಿದ್ದು ದಾಖಲೆ ಎಂದು ಹರ್ಷವ್ಯಕ್ತಪಡಿಸಿದರು. ಗ್ರಾಮೀಣ ಜನರಲ್ಲಿ ಸ್ವಚ್ಛತೆಯ ಕುರಿತು ಅರಿವನ್ನು ಮೂಡಿಸಲು ಈ ಯೋಜನೆ ಮೂಲಕ ಕರ್ನಾಟಕ ವಿಶ್ವವಿದ್ಯಾಲಯದ ಎನ.ಎಸ್.ಎಸ್ ಘಟಕದ ಮೂಲಕ ಅನೇಕ ಯೋಜನೆಗಳಗನ್ನು ಹಾಕಿಕೊಂಡಿದೆ ಎಂದರು.

ಕಾರ್ಯಕ್ರಮದಲ್ಲಿ ಧಾರವಾಡ ಜಿಲ್ಲಾ ಪಂಚಾಯತ ಸಿಇಓ ಆರ್ ಸ್ನೇಹಲ್ ಮಾತನಾಡಿ ಧಾರವಾಡ ಜಿಲ್ಲೆಯನ್ನು ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆಯನ್ನಾಗಿಸಲು ಜಿಲ್ಲಾಡಳಿತವು ಪಣ ತೊಟ್ಟಿದ್ದು, ಈ ದಿಸೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ವಾಪ್ತಿಯ ಎಲ್ಲ ಕಾಲೇಜುಗಳು ಜಿಲ್ಲೆಯಲ್ಲಿ 25 ಎನ್.ಎಸ್.ಎಸ್ ಘಟಕಗಳು ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲು ಸ್ವಯಂ ಸೇವಕರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಆದ್ದರಿಂದ ಗ್ರಾಮಸ್ಥರು ಎಲ್ಲರು ಶೌಚಾಲಯಗಳನ್ನು ಬಳಸಿ ಎಂದು ಸಲಹೆ ನೀಡಿದ ಅವರು ನಿಮ್ಮ ಮಕ್ಕಳ ಭವಿಷ್ಯ ಉತ್ತಮವಾಗಿ ಆರೋಗ್ಯಕರವಾಗಿ ಇಡಲು ಶೌಚಾಲಯಗಳ ಬಳಕೆ ಅವಶ್ಯಕ ಆದ್ದರಿಂದ ಗ್ರಾಮಸ್ಥರೆಲ್ಲರು ಸರಕಾರದ ಜೂತೆಗೆ ಕೈಜೋಡಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜಕರಾದ ಡಾ ಎಮ್ ಬಿ ದಳಪತಿ ಮಾತನಾಡಿ ಕರ್ನಾಟಕ ಕಲಾ ಮಹಾವಿದ್ಯಾಲಯವು ನೂರು ವರ್ಷಗಳನ್ನು ಪೂರೈಸುತಿದ್ದು, ಈ ಶತಮಾನೋತ್ಸದ ಸಂದರ್ಭದಲ್ಲಿ ಕಾಲೇಜಿನ ಎನ್.ಎಸ್.ಎಸ್ ಘಟಕವು ನೂರು ಶೌಚಾಲಯಗಳನ್ನು ನಿರ್ಮಿಸಲು ಯೋಜನೆ ಹಾಕಿಕೊಂಡು ಕೇವಲ ಐದು ದಿನಗಳಲ್ಲಿ 100 ಶೌಚಾಲಯಗಳನ್ನು ನಿರ್ಮಿಸಿದ್ದು ಇಂದೊಂದು ದಾಖಲೆಯಾಗಿದ್ದು, ಪ್ರಥ–'ಮವಾಗಿ ಕರ್ನಾಟಕ ಕಾಲೇಜಿನ ಮುಖಾಂತರ ಶೌಚಾಲಯಗಳನ್ನು ನಿರ್ಮಿಸಲು 2012 ರಿಂದ ಪ್ರಾರಂಭಿಸಿದೆ ಎಂದ ಅವರು ಗ್ರಾಮೀಣ ಹೆಣ್ಣು ಮಕ್ಕಳ ಗೌರವ ಕಾಪಾಡಲು ನಮ್ಮ ವಿದ್ಯಾರ್ಥಿಗಳು ಈ ಒಂದು ಮಹತ್ವವಾದ ಯೋಜನೆಗೆ ರೂಪಿಸುವಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ ಎಂದರು.

ಕರ್ನಾಟಕ ಕಲಾ ಮಹಾವಿದ್ಯಾಲಯದ ಎನ್ ಎಸ್ ಎಸ್ ಘಟಕದ ಅಧಿಕಾರಿಗಳಾದ ಡಾ.ಬಿ.ಎಸ್. ಭಜಂತ್ರಿ ಪ್ರಾಸ್ತಾವಿಕವಾಗಿ ಮಾತನಾಡಿ ಇಂದು 112 ಶೌಚಾಲಯಗಳನ್ನು ಯಾದವಾಡ ಗ್ರಾಮದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರ ಮೂಲಕ ನಿರ್ಮಿಸಿದ್ದು, ಈ ಮಹತ್ವಕಾಂಕ್ಷಿ ಯೋಜನೆಗೆ ಗ್ರಾಮಸ್ಥರ ಸಹಕಾರದ ಜೊತೆಗೆ ಗ್ರಾಮ ಪಂಚಾಯತಿಯ ಸದಸ್ಯರ ಮತ್ತು ಅಧಿಕಾರಿಗಳ ಶ್ರಮದ ಮೂಲಕ ಎಂದು ಈ ಯೋಜನೆ ಸಾಕಾರಗೂಂಡಿದೆ ಎಂದ ಅವರು ಈ ಶೌಚಾಲಯಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡ ಎಲ್ಲ ಸ್ವಯಂ ಸೇವಕರಿಗೆ ಶುಭಾಷಯಗಳನ್ನು ಕೋರಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾಪಂಚಾಯತಿಯ ಅಧಿಕಾರಿ ಭೀಮಪ್ಪ ಎನ್ ಮತ್ತು ಯಾದವಾಡ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾದ ಶ್ರೀಮತಿ ಶಿವವ್ವ ಬೆಟಗೇರಿ, ಎಸ್.ಡಿ.ಎಮ್.ಸಿ ಅಧ್ಯಕ್ಷರು, ಗ್ರಾಮ ಪಂಚಾಯತಿಯ ಸದಸ್ಯರು ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಮತ್ತು ಕರ್ನಾಟಕ ಕಾಲೇಜಿನ ಎಲ್ಲ ಎನ್. ಎಸ್.ಎಸ್ ಸ್ವಯಂ ಸೇವಕರು ಹಾಜರಿದ್ದರು. ಕರ್ನಾಟಕ ಕಲಾ ಮಹಾವಿದ್ಯಾಲಯದ ಮತ್ತೋರ್ವ ಎನ್.ಎಸ್.ಎಸ್ ಅಧಿಕಾ–ರಿಗಳಾದ ಝಾಕೀರ ಗುಳಗುಂದಿ ಅತಿಥಿಗಳನ್ನು ಸ್ವಾಗತಿಸಿ ಪರಿಚಯಸಿದರು, ಕಾರ್ಯಕ್ರಮವನ್ನು ಸೌಂದರ್ಯ ಮತ್ತು ಕಿಶೋರ್ ನಿರ್ವಹಿಸಿದರು.



ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೋ. ಪ್ರಮೋದ ಗಾಯ ಘೋಷಿಸಿದರು. ಅವರು ಸೋಮವಾರದಂದು ಯಾದವಾಡ ಗ್ರಾಮ ಪಂಚಾಯತ ಆವರಣದಲ್ಲಿ ಆಯೋಜಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಮೂಲಕ ನಿರ್ಮಿಸಿದ 112 ಶೌಚಾಲಯಗಳನ್ನು ಧಾರವಾಡ ಜಿಲ್ಲೆಯ ಯಾದವಾಡ ಗ್ರಾಮದ ಜನರಿಗೆ ಹಸ್ತಾಂತರಿಸಿದರು.

# ಪದವಿ ಹಂತದ ವಿದ್ಯಾರ್ಥಿ ಜೀವನವು ಸ್ವಂತ ನಿರ್ಧಾರ ಭವಿಷ್ಯದೃಷ್ಟಿಯಿಂದ ಬಹಳ ಮಹತ್ವ: ಡಾ. ವಿಶ್ವನಾಥ ಭಟ್ಟ

ಪದವಿ ಹಂತದ ವಿದ್ಯಾರ್ಥಿ ಜೀವನವು ಸ್ವಂತ ನಿರ್ಧಾರ ತೆಗೆದುಕೊಳ್ಳಲು ಮತ್ತು ಜವಾಬ್ದಾ–ರಿಯನ್ನು ವಹಿಸಿಕೊಳ್ಳುವ ಒಂದು ಪ್ರಮುಖ ಹಂತವಾಗಿದೆ ಎಂದು ಅಮೇರಿಕಾದ ಮಿಕ್ರಾನ್ ತಂತ್ರಜ್ಞಾನದ ವಿಜ್ಞಾನಿ ಡಾ ವಿಶ್ವನಾಥ ಭಟ್ಟ ಅಭಿಪ್ರಾಯಪಟ್ಟರು ಅವರು ನಗರದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯವು ಸೃಜನಾ ರಂಗಮಂದಿರದಲ್ಲಿ ಆಯೋಜಿಸಿದ 2017–18ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಚಾಲನೆ ನೀಡಿ ಮಾತನಾಡುತ್ತಿದ್ದರು.

ಹದಿನೆಂಟು ವಯಸ್ಸಿಗೆ ವ್ಯಕ್ತಿ ಸರಿಯಾದ ನಿರ್ಧಾರ ತೆಗೆದುಕೂಳ್ಳುವ ಒಂದು ಸಾಮರ್ಥ್ಯ ವಿದ್ಯಾರ್ಥಿಗೆ ಬಂದಿರುತ್ತದೆ ಆದ್ದರಿಂದ ವಿದ್ಯಾರ್ಥಿಗಳು ಸರಿಯಾದ ಹಂತದಲ್ಲಿ ಸರಿಯಾದ ನಿರ್ಧಾರ ತೆಗೆದುಕೂಳ್ಳುವದರಿಂದ ಮುಂದಿನ ಭವಿಷ್ಯದೃಷ್ಟಿಯಿಂದ ಬಹಳ ಮಹತ್ವದ್ದು ಎಂದ ಅವರು ವಿದ್ಯಾರ್ಥಿಗಳು ಈ ಹಂತದಲ್ಲಿ ಸರಿಯಾದ ರೀತಿಯಲ್ಲಿ ತಮ್ಮನ್ನು ಅಧ್ಯಯನದ ಕಡೆಗೆ ತೂಡಗಿಸಿಕೂಳ್ಳುವದರಿಂದ ಯಶಸ್ಸು ಸಾಧಿಸಬಹುದು ಎಂದರು. ಭಾರತವು ಯುವಜನತೆಯನ್ನು ಹೂಂದಿದ ದೂಡ್ಡ ದೇಶವಾಗಿದೆ ಆದರೆ ನಮ್ಮ ಯುವ ಜನತೆಯು ಇಂದು ಗುರಿ ಇಲ್ಲದೆ ಇರುವದರಿಂದ ವ್ಯಯಕ್ತಿಕ ಬೆಳವಣಿಗೆ ಸಾಧ್ಯವಾಗಲಾರದು ಎಂದರು. ವಿದ್ಯಾಥಿಗಳು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವದರಿಂದ ನಮ್ಮ ಸಂವಹನ ಕೌಶಲ್ಯ ಹೆಚ್ಚುವದರ ಜತೆಗೆ ಟೀಮ್ ವರ್ಕಗೆ ಹೆಚ್ಚು ಅನೂಕಲವಾಗಲಿದೆ ಎಂದರು. ಚಟುವಟಿಕೆಗಳಲಿ ್ಲ ಭಾಗವಹಿಸುವದರಿಂದ



ಡಾ ವಿಶ್ವನಾಥ ಭಟ್ಟ ಅವರು ನಗರದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯವು ಸೃಜನಾ ರಂಗಮಂದಿರದಲ್ಲಿ ಆಯೋಜಿಸಿದ 2017–18ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯಚಟುವಟಿಕೆಗಳಿಗೆ ಚಾಲನೆ ನೀಡುತ್ತಿರುವದು. ಚಿತ್ರದಲ್ಲಿ ಶ್ರೀಮತಿ ಪ್ರೊ. ಬೆಲ್ಲದ್ ಡಾ ರಾಜೇಶ್ವರಿ ಮಹೇಶ್ವರಯ್ಯ, ಪ್ರಿಯದರ್ಶಿನಿ ಸಾನಿಕೂಪ್ಪ, ಡಾ ಸಿ ಎಫ್ ಮೂಲಿಮನಿ, ಡಾ ಜಿ. ಎಚ್ ಮಳಿಮಠ ಮತ್ತು ವಿದ್ಯಾರ್ಥಿ ಕಾರ್ಯದರ್ಶಿಗಳು ಇದ್ದಾರೆ.

–ಪುಟ 2

ನಮ್ಮ ಮನಸ್ಸಿನ ಜತೆಗೆ ದೈಹಿಕ ಸಾಮರ್ಥ್ಯ ಹೆಚ್ಚುತ್ತದೆ. ಎಂದರು.

ಡಿವೈಎಸ್ಪಿ ಪ್ರಿಯದರ್ಶಿನಿ ಸಾಣಿಕೊಪ್ಪ ಮಾತನಾಡಿ ಇಂದಿನ ಯುವ ಜನಾಂಗವು ಅಪರಿಮಿತ ಮೊಬೈಲ್ ಬಳಕೆಯಿಂದ ಅಧ್ಯಯನದ ಕಡೆಗೆ ವಿಮುಖವಾಗಿದ್ದು, ಇದು ಆತಂಕಕಾರಿ ಬೆಳವಣಿಗೆಗೆ ಎಂದ ಅವರು ನಾನು ಈ ಹುದ್ದೆಗೆ ಬರಲು ಮೂದಲಿನಿಂದಲು ನಾನು ಪೋಲಿಸ ಅಧಿಕಾರಿ ಆಗಬೇಕು ಎಂಬ ಆಸೆಯಿಂದ ಚಿಕ್ಕಂದಿನಿಂದಲೂ ನನ್ನ ಎಲ್ಲ ಶೈಕ್ಷಣಿಕ ಹಂತವನ್ನು ಪರಿಶ್ರಮದಿಂದ ಉತ್ತಮಪಡಿಸಿಕೊಂಡೆ ಆದ್ದರಿಂದ ನಾನು ನನ್ನ ಗುರಿ ಮಟ್ಟಲು ಸಾಧ್ಯವಾಯಿತು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ ಸಿ ಎಫ್ ಮೂಲಿಮನಿ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಹಾಜರಿದ್ದರು. ಕಾರ್ಯಕ್ರಮದಲ್ಲಿ ವಿಜ್ಞಾನ ಕಾಲೇಜಿನ ಸಾಂಸ್ಕೃತಿಕ ಕಾರ್ಯಧ್ಯಕ್ಷರಾದ ಡಾ ಜಿ.ಎಚ್ ಮಳಿಮಠ ವಿದ್ಯಾರ್ಥಿ ಕಾರ್ಯದರ್ಶಿ ಶರತ್ ಚಂಚಟಗೇರಿ ಮತ್ತು ಪ್ರಾಧ್ಯಾಪಕ ವೃಂದ ವಿದ್ಯಾರ್ಥಿಗಳು ಹಾಜರಿದ್ದರು.

# 'ಸರ್ ಸಿದ್ದಪ್ಪ ಕಂಬಳಿಯವರ 136ನೇ ಜಯಂತೋತ್ಸವ'

ಉತ್ತರ ಕರ್ನಾಟಕ ಜನರ ಸಲುವಾಗಿ, ನನ್ನ ಊರು ನನ್ನ ಜನ ಎಂಬ ಭಾವನೆಯಿಂದ ನನ್ನಜ್ಜ ಸರ್ ಸಿದ್ದಪ್ಪ ಕಂಬಳಿಯವರು ಬಹಳ ದುಡಿದರು. ಕರ್ನಾಟಕ ಕಾಲೇಜು ಸ್ಥಾಪಿಸುವಲ್ಲಿ ಅವರ ಕೊಡುಗೆ ಬಹಳ ಮಹತ್ವದಾಗಿದೆ ಎಂದು ಕರ್ನಾಟಕ ಸರಕಾರದ ಗಣಿ ಮತ್ತು ಭೂವಿಜ್ಞಾನ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ ವಿನಯ ಕುಲಕರ್ಣಿ ಅಭಿಪ್ರಾಪಟ್ಟರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯವು ಸೃಜನಾ ರಂಗಮಂದಿರದಲ್ಲಿ ಆಯೋಜಿಸಿದ ಸರ್ ಸಿದ್ದಪ್ಪ ಕಂಬಳಿಯವರ 136ನೇ ಜಯಂತೋತ್ಸವ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಸರ್ ಸಿದ್ದಪ್ಪ ಕಂಬಳಿಯವರು ಮೂಲತಹ ಬಡ ಕುಟುಂಬದಿಂದ ಬಂದಿದ್ದು, ಅವರು ಬಡವರ ಹಿಂದುಳಿದ ಮತ್ತು ದಲಿತರ ಪರವಾಗಿ ಅವರು ಬ್ರಿಟೀಷ್‌ರ ಕಾಲದಲ್ಲಿ ಮಂತ್ರಿಯಾಗಿ ಇದ್ದುಕೊಂಡು ಅನೇಕ ಸಮಾಜ ಮುಖಿ ಹೂರಾಟಗಳಲ್ಲಿ ಸಿದ್ದಪ್ಪ ಕಂಬಳಿಯವರು ತೊಡಗಿಸಿಕೊಂಡ ಅವರು ಡಾ ಬಾಬಾ ಸಾಹೇಬ ಅಂಬೇಡ್ಕರ್, ಜೋತಿಬಾ ಪುಲೆ, ಕೊಲ್ಹಾಪುರದ ಶಾಹು ಮಹಾರಾಜರ ಜತೆ ನಿಕಟ ಸಂಪರ್ಕ ಹೊಂದಿದ್ದರು ಎಂದ ಅವರು ಸರ್ ಸಿದ್ದಪ್ಪ ಕಂಬಳಿಯವರು ಡಾ ಬಿ.ಆರ್. ಅಂಬೇಡ್ಕರ್ ಅವರಿಗೆ ಪುಣೆಯ ಕಾಲೇಜಿನಲ್ಲಿ ಕಾನುನೂ ವಿಷಯದ ಪ್ರಾಧ್ಯಾಪಕರ ಹುದ್ದೆ ನೀಡಿದ್ದ ಮಹಾನ ವ್ಯಕ್ತಿಯಾಗಿ ಅವರು ನನ್ನಜ್ಜ ಎಂದು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತದೆ ಎಂದು ಹರ್ಷ ವ್ಯಕ್ತಪಡಿಸಿ, ಕಂಬಳಿಯವರ ಚಿಂತನೆಗಳು ಹಿಂದುಳಿದ ಪರವಾಗಿದ್ದವು ಆದ್ದರಿಂದ ಅವರು ಆಗಲೇ ಸರ್ ಸಿದ್ದಪ್ಪ ಕಂಬಳಿಯವರು ಬ್ರಾಹ್ಮಣೇತರ ಪಕ್ಷವನ್ನು ಕೂಡ ಸಂಘಟಿಸಿದ್ದರು ಎಂದರು.

ಹನ್ನರಡನೇ ಶತಮಾನದಿಂದ ಬಸವಣ್ಣವರು 900 ವರ್ಷಗಳ ವರೆಗೆ ಸಮಾಜದಲ್ಲಿ ಸಮಾನತೆಗಾಗಿ ಅನುಭವ ಮಂಟಪದಿಂದ ಮೂಲಕ ಸಮಾನತೆಗಾಗಿ ಹೂರಾಟ ಪ್ರಾರಂಭಿಸಿದ್ದು, ನಂತರ ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅವರು ನೀಡಿದ ಸಂವಿಧಾನದ ಆಶೋತ್ತರಗಳ ಫಲವಾಗಿ ಇಂದು ಮಹಿಳೆಯರಿಗೆ ಎಲ್ಲ ಹಿಂದುಳಿದ ದಿನದಲಿತರಿಗೆ ಎಲ್ಲ ಕ್ಷೇತ್ರಗಳಲ್ಲಿ ಅವಕಾಶಗಳು ಒದಗಿಬರುತ್ತಿವೆ ಎಂದ ಅವರು ವಿದ್ಯಾರ್ಥಿಗಳಾದವರು ಇಂದು ಶ್ರದ್ದೆಯಿಂದ ಅಧ್ಯಯನ ಮಾಡಬೇಕು ಮತ್ತು ಕಾಲೇಜು ಸ್ಥಾಪನೆಗೆ ಕಾರಣರಾದ ಅರಟಾಳ ರುದ್ರಗೌಡರು, ರೊದ್ದ ಶ್ರೀನಿವಾಸರಾಯರು ಮತ್ತು ಸರ್ ಸಿದ್ದಪ್ಪ ಕಂಬಳಿ ಅವರ ಜೀವನದ ಆದರ್ಶ ತತ್ವಗಳನ್ನು ತಿಳಿದುಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದ ಅವರು ಕರ್ನಾಟಕ ಕಾಲೇಜಿನ ಜೊತೆಗೆ ಸರ್ ಸಿದ್ದಪ್ಪ ಕಂಬಳಿಯವರು ಬೆಳಗಾವಿಯ ಲಿಂಗರಾಜ ಕಾಲೇಜು ಸ್ಥಾಪಿಸುವಲ್ಲಿ ಅವರ ಕೊಡುಗೆ ನೆನೆಯುವಂತಹದ್ದು ಎಂದರು.

ಇಂದು ಧಾರವಾಡದ ಮುರಘಾ ಮಠದ ಪ್ರಸಾದ ನಿಲಯವು ಶತಮಾನೋತ್ಸವವನ್ನು ಆಚರಿಸುತ್ತಿದ್ದು, ನನ್ನ ಮುತ್ತಜ್ಜ ಕರವೀರಪ್ಪ ಕುಲಕರ್ಣಿ ಅವರಿಂದ ಸ್ಥಾಪಿತವಾದ ಪ್ರಸಾದ ನಿಲಯಕ್ಕೆ ಕರವೀರಪ್ಪ ಕುಲಕರ್ಣಿಯವರ 74 ಎಕರೆ ಜಮೀನಿಂದ ಬರುವ ಆದಾಯದಿಂದ ಪ್ರಸಾದ ನಿಲಯವನ್ನು ನಡೆಸಲಾಗುತಿತ್ತು. ಈ ಪ್ರಸಾದ ನಿಲಯವು ಎಲ್ಲ ಬಡ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಆಗಿನ ಕಾಲದಲ್ಲಿ ಬಹಳ ಅನೂಕಲವಾಗಿತ್ತು ಪ್ರತಿ ವರ್ಷವು ಸುಮಾರು 500 ರಿಂದ 600 ವಿದ್ಯಾರ್ಥಿಗಳಿಗೆ ಈ ಪ್ರಸಾದ ನಿಲಯವು ವರದಾನವಾಗಿತ್ತು ಎಂದ ಅವರು ಮೊದಲಿನಿಂದಲೂ ಸರ್ ಸಿದ್ದಪ್ಪ ಕಂಬಳಿಯವರು ಕುಟುಂಬದವರು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು ಎಂದು ವಿವರಿಸಿದ ಅವರು ವಿದ್ಯಾರ್ಥಿಗಳಾದವರು ತಮ್ಮ ತಂದೆ ತಾಯಿಗಳಿಗೆ ಗೌರವ ನೀಡಿ ಅವರನ್ನು ಪ್ರೀತಿಸುವದನ್ನು ಕಲಿಯಬೇಕು ಆದ್ದರಿಂದ ತಾಯಿಯ ಪ್ರೀತಿ ಬಹುದೊಡ್ಡದು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಅವರು ಅತಿಥಿಗಳನ್ನು ಸ್ವಾಗತಿಸಿದರು.




**ಗಣಿ ಮತ್ತು ಭೂವಿಜ್ಞಾನ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ ವಿನಯ ಕುಲಕರ್ಣಿ ಅವರು ಕರ್ನಾಟಕ ಕಲಾ ಮಹಾವಿದ್ಯಾಲಯವು ಸೃಜನಾ ರಂಗಮಂದಿರದಲ್ಲಿ ಆಯೋಜಿಸಿದ ಸರ್ ಸಿದ್ದಪ್ಪ ಕಂಬಳಿಯವರ 136ನೇ ಜಯಂತೋತ್ಸವ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಿರುವದು.**

ಕಾರ್ಯಕ್ರಮದಲ್ಲಿ ಕರ್ನಾಟಕ ವಿಜ್ಞಾನ ಕಾಲೇಜಿನ ಪ್ರಾಚಾರ್ಯರಾದ ಡಾ ಸಿ.ಎಫ್.ಮೂಲಿಮನಿ ಮಾತನಾಡಿ ಕರ್ನಾಟಕ ಕಾಲೇಜು ಸ್ಥಾಪನೆಯಾಗಿ ಮುಚ್ಚುವ ಸ್ಥಿತಿಯಲ್ಲಿದ್ದಾಗ ಸರ್ ಸಿದ್ದಪ್ಪ ಕಂಬಳಿಯವರು ಬ್ರಿಟೀಷರ್ ಮನವೊಲಿಸಿ ರಾತ್ರೋರಾತ್ರಿ ಪುಣೆಯ ಡೆಕ್ಕನ್ ಕಾಲೇಜಿನಿಂದ ಕರ್ನಾಟಕ ಕಾಲೇಜಿಗೆ ವಿಜ್ಞಾನದ ಪರಿಕರಗಳನ್ನು ವರ್ಗಾಯಿಸಿದ್ದ ಮಹಾನ್ ಶಿಕ್ಷಣ ಪ್ರೇಮಿ ಕಂಬಳಿಯವರು ಆಗಿದ್ದರು ಎಂದ ಅವರು ಸರ್ ಸಿದ್ದಪ್ಪ ಕಂಬಳಿಯವರು ಬಡತನದಿಂದಲೇ ಮೇಲಕ್ಕೆ ಏರಿದವರು ಬ್ರಿಟೀಷ್ ಆಡಳಿತದಲ್ಲಿ ಏಳು ಖಾತೆಯನ್ನು ಹೊಂದಿ ಮಂತ್ರಿಯಾದವರು ಸಾಮಾಜಿಕ ಕಳಕಳಿ ಹೊಂದಿದ್ದರು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಮಲ್ಲಿಕಾರ್ಜುನ ಪಾಟೀಲ್ ಮಾತನಾಡಿ ಕರ್ನಾಟಕ ಕಾಲೇಜು ತನ್ನದೇ ಆದ ಗತ ಇತಿಹಾಸವನ್ನು ಹೊಂದಿದ್ದು, ಸರ್ ಸಿದ್ದಪ್ಪ ಕಂಬಳಿಯವರು ಇಂಗ್ಲೆಂಡಿನ ಆಕ್ಸಫರ್ಡ್ ಮಾದರಿಯಲ್ಲಿ ಕರ್ನಾಟಕ ಕಾಲೇಜು ಸ್ಥಾಪಿಸುವಲ್ಲಿ ಅವರ ಪಾತ್ರ ಮಹತ್ವದಾಗಿದೆ ಎಂದ ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸರ್ ಸಿದ್ದಪ್ಪ ಕಂಬಳಿಯವರ ಅಧ್ಯಯನ ಪೀಠ ಸ್ಥಾಪನೆ ಆಗಬೇಕು ಈ ನಿಟ್ಟಿನಲ್ಲಿ ಪ್ರಯತ್ನಿಸಲಾಗುವದು ಎಂದರು.

ಕಾರ್ಯಕ್ರಮಕ್ಕೂ ಮೊದಲು ಶಾಸಕರಾದ ಅರವಿಂದ ಬೆಲ್ಲದ ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಆವರಣದಲ್ಲಿರುವ ಸರ್ ಸಿದ್ದಪ್ಪ ಕಂಬಳಿಯವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿ ಕುಮಾರಿ ಶ್ರದ್ಧಾ ವಚನ ಗೀತೆಗಳನ್ನು ಹಾಡಿದರು. ಕಾರ್ಯಕ್ರಮದಲ್ಲಿ ಸರ್ ಸಿದ್ದಪ್ಪ ಕಂಬಳಿ ಟ್ರಸ್ಟ್‌ನ ಅಧ್ಯಕ್ಷರಾದ ನಾಜರಾಜ್ ಪಟ್ಟಣಶೆಟ್ಟಿ, ಪರಿಸರವಾದಿ ಶಂಕರ ಕುಂಬಿ, ಸರ್ ಸಿದ್ದಪ್ಪ ಕಂಬಳಿ ಟ್ರಸ್ಟ್‌ನ ಪಧಾದಿಕಾರಿಗಳು ಮತ್ತು ಕರ್ನಾಟಕ ಕಲಾ ಮತ್ತು ವಿಜ್ಞಾನ ಕಾಲೇಜಿನ ಪ್ರಾಧ್ಯಾಪಕ ವೃಂದ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಡಾ ವಿ.ಬಿ ಸಾವಿರಮಠ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಕರ್ನಾಟಕ ಸಂಗೀತ ಕಾಲೇಜಿನ ಪ್ರಾಚಾರ್ಯರಾದ ಡಾ ಮಲ್ಲಿಕಾರ್ಜುನ ತರ್ಲಗಟ್ಟಿ ವಂದಿಸಿದರು.

# ತಾಯಿ ಒಬ್ಬ ಗುರು ಮಾತ್ರ ಅಲ್ಲ ಅವಳು ಒಬ್ಬ ಒಳ್ಳೆಯ ಗೆಳತಿ :ಮನಶಾಸ್ತ್ರಜ್ಞೆ ಡಾ ಅಪರ್ಣಾ ಲಿಮಿಯೆ




**ಹುಬ್ಬಳ್ಳಿಯ ಮಂತರಂಗಾ ಆಪ್ತ ಸಲಹಾ ಸಂಸ್ಥೆಯ ಮನಶಾಸ್ತ್ರಜ್ಞೆ ಡಾ ಅಪರ್ಣಾ ಲಿಮಿಯೆ ಅವರು ನಗರದ ಕರ್ನಾಟಕ ಕಾಲೇಜಿನ ಮಹಿಳಾ ಸಂಘವು ಹಮ್ಮಿಕೂಂಡ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರವದು. ಚಿತ್ರದಲ್ಲಿ ಡಾ ಎಸ್ ಅನ್ನಪೂರ್ಣ, ಡಾ ರಾಜೇಶ್ವರಿ ಮಹೇಶ್ವರಯ್ಯ, ಡಾ ರಜನಿ ಹೆಚ್, ಡಾ ಕೀರ್ತಿ ಮಿರಜಕರ್, ಡಾ ವಿಭಾವರಿ ಕುಲಕರ್ಣಿ ಮತ್ತು ಮಹಿಳಾ ಸಂಘದ ವಿದ್ಯಾರ್ಥಿ ಕಾರ್ಯದರ್ಶಿಗಳು ಹಾಜರಿದ್ದರು.**

ತಾಯಿ ಒಬ್ಬ ಗುರು ಮಾತ್ರವಲ್ಲದೆ ಅವಳು ಒಬ್ಬ ಒಳ್ಳೆಯ ಗೆಳತಿ ಮತ್ತು ಆಪ್ತ ಸಲಹೆಗಾರ್ತಿ ಎಂದು ಹುಬ್ಬಳ್ಳಿಯ ಮಂತರಂಗಾ ಆಪ್ತ ಸಲಹಾ ಸಂಸ್ಥೆಯ ಮನಶಾಸ್ತ್ರಜ್ಞೆ ಡಾ ಅಪರ್ಣಾ ಲಿಮಿಯೆ ಅಭಿಪ್ರಾಯಪಟ್ಟರು ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರೇನ್ ಸಭಾಂಗಣದಲ್ಲಿ ಕರ್ನಾಟಕ ಕಾಲೇಜಿನ ಮಹಿಳಾ ಸಂಘವು ಆಯೋಜಿಸಿದ 'ತಾಯಿಯೇ ಮೊದಲ ಗೆಳತಿ' ಎಂಬ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಇಂದು ಅನೇಕ ಯುವತಿಯರು ತಮ್ಮಲ್ಲಿ ಉಂಟಾಗುವ ಅನೇಕ ದೈಹಿಕ ಮತ್ತು ಮಾನಸಿಕ ಬದಲಾವಣೆಗಳನ್ನು ಹಂಚಿಕೊಳ್ಳಲು ಹಿಂಜರಿಕೆಯಿಂದ ಅನೇಕ ಸಮಸ್ಯೆಗಳನ್ನು ಎದರಿಸುತ್ತಿದ್ದು, ಇಂದು ಮಗಳಿಗೆ ತಾಯಿ ಒಬ್ಬ ಆಪ್ತ ಗೆಳತಿ ಆಗಿದೆ. ಇಂದು ಹೆಚ್ಚಾಗಿ ಯುವತಿಯರು ಮುಕ್ತವಾಗಿ ತಮ್ಮ ಅನಿಸಿಕೆ ಮತ್ತು ಗೂಂದಲಗಳನ್ನು ಹಂಚಿಕೂಳ್ಳುವದರಿಂದ ಮಾನಸಿಕ ಸಮಸ್ಯೆಗಳಿಗೆ ಪರಿಹಾರ ಸಿಗಬಹುದು ಎಂದರು.

ಕರ್ನಾಟಕ ಕಲಾ ಮಹಾವಿದ್ಯಾಲಯದ ಮಹಿಳಾ ಸಂಘದ ಅಧ್ಯಕ್ಷರಾದ ಪ್ರಾಧ್ಯಾಪಕಿ ಡಾ ಎಸ್ ಅನ್ನಪೂರ್ಣ ಮಾತನಾಡಿ ಇಂದು ಕರ್ನಾಟಕ ಕಾಲೇಜಿನಲ್ಲಿ ಮಹಿಳಾ ಸಂಘವು ಅಸ್ತಿತ್ವಕ್ಕೆ ಬಂದ ನಂತರ ಅನೇಕ ಮಹಿಳಾಪರ ಕಾರ್ಯಕ್ರಮಗಳನ್ನು ಸಂಘದ ವತಿಯಿಂದ ಆಯೋಜಿಸಿದೆ. ಎಂದ ಅವರು ಇಂದು ವಿದ್ಯಾರ್ಥಿನಿಯರಿಗೆ ತಾಯಿಯ ಮಹತ್ವ ಮತ್ತು ತಾಯಿ ನಮಗೆ ಎಷ್ಟು ಆಪ್ತಸಲಹೆಗಾರ್ತಿಯಾಗಿ ಬೇಕಾಗಿರಬಹುದು. ಹೆಣ್ಣುಮಕ್ಕಳಿಗೆ ಅವಶ್ಯಕ ಎನ್ನುವುದು ಈ ಕಾರ್ಯಕ್ರಮದ ಉದ್ದೇಶ ಎಂದು ಕಾರ್ಯಕ್ರಮದ ಕುರಿತು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದ ಡಾ ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ವಿದ್ಯಾರ್ಥಿನಿಯರಿಗೆ ತಾಯಿ ಹೆಚ್ಚು ಆಪ್ತವಾಗಿದ್ದು, ತಂದೆಗಿಂತ ತಾಯಿಯು ಮಕ್ಕಳಿಗೆ ಗುರು ಜತೆಗೆ ಒಬ್ಬ ಗಳತಿ ಆದ್ದರಿಂದ ಇಂತಹ ಕಾರ್ಯಕ್ರಮಗಳಿಂದ ವಿದ್ಯಾರ್ಥಿನಿಯಿರಿಗೆ ಒಳ್ಳೆಯ ಮಾರ್ಗದರ್ಶನ ಸಿಗುವುದರಿಂದ ಸರಿ ತಪ್ಪುಗಳ ಅರಿವು ಮೂಡಿಸುವಲ್ಲಿ ಹೆಚ್ಚು ಪ್ರಯೋಜನಕಾರಿಯಾಗಿದೆ ಎಂದರು.

ಡಾ. ಕೀರ್ತಿ ಮಿರಜಕರ್ ಅವರು ಅತಿಥಗಳನ್ನು ಸ್ವಾಗತಿಸದರು, ಡಾ. ವಿಭಾವರಿ ಕುಲಕರ್ಣಿ ಅತಿಥಿಗಳನ್ನು ಪರಿಚಯಿಸಿದರು. ಕಾರ್ಯಕ್ರಮವನ್ನು ಸುಜಾತಾ ಮತ್ತು ಸವಿತಾ ನಿರೂಪಿಸಿದರು. ಡಾ. ರಜನಿ ಹೆಚ್ ವಂದಿಸಿದರು. ಮಹಿಳಾ ಸಂಘದ ವಿದ್ಯಾರ್ಥಿ ಕಾರ್ಯದರ್ಶಿಗಳಾದ ಫಾತಿಮಾ ಲಕ್ಷ್ಮೇಶ್ವರ, ಸೌಜನ್ಯ ಮತ್ತು ಪೂಜಾ ದೇಸಾಯಿ ಹಾಜರಿದ್ದರು.


ಗೌರವ ಸಂಪಾದಕರು: ಪ್ರಾಚಾರ್ಯರು ಡಾ. ರಾಜೇಶ್ವರಿ ಮಹೇಶ್ವರಯ್ಯ, ಸಂಚಿಕೆ ಸಂಪಾದಕರು: ಡಾ.ಪ್ರಭಾಕರ್ ಕಾಂಬಳೆ, ಡಾ.ರವೀಂದ್ರ ಜಲರೆಡ್ಡಿ, ವಿದ್ಯಾರ್ಥಿ ಸಂಪಾದಕರು: ಚೇತನ್,ನಿತಿನ್. **ಪುಟ ವಿನ್ಯಾಸ: ಶ್ರೀಹರಿ.**